ದಿನಾಂಕಃ17-01-2017 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದೂವರೆದ ಪಾಟೀ ಸವಾಲುಃ ವಾದಿಗಳ ಪರ ಶ್ರೀಎಂಬಿಸಿ ವಕೀಲರಿಂದಃ

1. ಪ್ರತಿವಾದ ಸಂಖ್ಯೆ 14 ಮತ್ತು 15 ನಮ್ಮ ಗ್ರಾಮದವರು ಎಂದರೆ ಸರಿ. ದಾವಾ ಎ ಶೆಡ್ಯೂಲ್ 3 ರ ಐಟಂ 7 ಮತ್ತು 8 ನಮ್ಮ ಕುಟುಂಬಕ್ಕೆ ಸಂಬಂಧಿಸಿ ಆಸ್ತಿಗಳು ಎಂದರೆ ಸರಿ. ದಿನಾಂಕಃ21/10/1999 ರ ಕಾಲಕ್ಕೆ ಜಮೀನುಗಳನ್ನು ಅದಲು-ಬದಲು ಮಾಡಿಕೊಳ್ಳುವ ಸಮಯದಲ್ಲಿ ಹಾಗೂ ಮ್ಯೂಟೇಷನ್ ಸಂಖ್ಯೆ 1797 ರ ಕಾಲಕ್ಕೆ ಸದರಿ ವ್ಯವಹಾರಗಳಿಗೆ ವಾದಿಗಳ ಸಮ್ಮತಿ ಪಡೆದಿಲ್ಲ ಎಂದರೆ ಸರಿ. ದಾವಾ ಎ ಶೆಡ್ಯೂಲ್ 3 ರ ಐಟಂ 7 ರ ಖಾತೆ 7ನೇ ಪ್ರತಿವಾದಿಯ ಹೆಸರಿನಲ್ಲಿ ಮತ್ತು 8 ರ ಖಾತೆ ನನ್ನ ಅಣ್ಣ ದೊಡ್ಡಭರಮಪ್ಪನ (12ನೇ ಪ್ರತಿವಾದಿ) ಹೆಸರಿನಲ್ಲಿ ಇದೆ ಎಂದರೆ ಸರಿ. 12ನೇ ಪ್ರತಿವಾದಿ ಸದರಿ ಆಸ್ತಿಯನ್ನು 14ನೇ ಪ್ರತಿವಾದಿಗೆ ಅದೇ ರೀತಿ ಮೃತ 7ನೇ ಪ್ರತಿವಾದಿ ಸದರ ಆಸ್ತಿಯನ್ನು 15ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯ ಪತ್ರಗಳಿಗೆ ವಾದಿಗಳು ಪಕ್ಷಗಾರರಲ್ಲ ಎಂದರೆ ಸರಿ. ಈ ರೀತಿ ಮಾರಾಟ ಮಾಡಿದ ಆಸ್ತಿಗಳನ್ನು 7 ಮತ್ತು 12ನೇ ಪ್ರತಿವಾದಿಗಳ ಹಿಸ್ಸೆಗೆ ವಿಂಗಡಿಸುವುದು ನ್ಯಾಯ ಸಮ್ಮತವಾಗಿದೆ ಎಂದರೆ ಅವರಿಗೆ ಹಿಸ್ಸೆ ಇಲ್ಲ ಎನ್ನುತ್ತಾರೆ. 7 ಮತ್ತು 12ನೇ ಪ್ರತಿವಾದಿಗಳಿಗೂ ಹಿಸ್ಸೆ ಹಕ್ಕು ಇದ್ದು ಅದನ್ನು ತಪ್ಪಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.